# ಕರ್ನಾಟಕ ವಿಧಾನ ಸಭೆ

## ಗುರುವಾರ 25ನೇ ಫೆಬ್ರುವರಿ 1993

ಸದಸ್ಯರು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಎಸ್. ಕೊಜಲಗಿ) ಅವರು ಪ್ರಾರ್ಥನೆಯನ್ನು ಪಠಿಸಿದರು.

## ಕೇಂದ್ರದ ರೈಲ್ವೆ ನೀತಿಯಿಂದ ಕರ್ನಾಟಕಕ್ಕೆ ಅನ್ಯಾಯ

ಶ್ರೀ ನಾಟಾಳ್ ನಾಗರಾಜ್ (ಚಾಮರಾಜನಗರ):– ಸನ್ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ಕಾಲವನ್ನು ಪ್ರಾರಂಭಿಸುವುದಕ್ಕಿಂತ ಮುಂಚಿತವಾಗಿ ತಮ್ಮಲ್ಲಿ ನಾನು ಒಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ನಿನ್ನೆ ದಿನ ರೈಲ್ವೆ ಆಯವ್ಯಯ ಮಂಡನೆಯಾಗಿದೆ. ಇದರಿಂದ ಕರ್ನಾಟಕಕ್ಕೆ ತುಂಬಾ ಅನ್ಯಾಯವಾಗಿದೆ. ಚಾಮರಾಜನಗರ–ಮೆಟ್ಟುಪಾಳ್ಯ ಬ್ರಾಡ್‌ಗೇಜ್ ಆಗಿಲ್ಲ, ಯಲಹಂಕ–ಶೆಂಗಳೂರು ಉತ್ತರಹಳ್ಳಿ ಬ್ರಾಡ್‌ಗೇಜ್ ಆಗಿಲ್ಲ. ಕರ್ನಾಟಕಕ್ಕೆ ಈ ರೀತಿ ಆಗಿರತಕ್ಕ ಅನ್ಯಾಯವನ್ನು ನಾನು ಸದನದ ಮೂಲಕ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೇಂದ್ರ ಸರ್ಕಾರವನ್ನು ಧಿಕ್ಕಾರ ಮಾಡಿ ಪ್ರತಿಭಟಿಸುತ್ತಾ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಕೇಂದ್ರ ರೈಲ್ವೆ ಮಂತ್ರಿಗಳಾದ ಶ್ರೀ ಜಾಫರ್ ಷರೀಫರ ಬಗ್ಗೆ ನನಗೆ ಬಹಳ ಗೌರವವಿದೆ. ಅವರ ಕರ್ನಾಟಕ್ಕೆ ಹಿಂದೆಲ್ಲಾ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಆದರೆ, ಈಗ ಮಂಡಿಸಿರತಕ್ಕ ರೈಲ್ವೆ ಆಯವ್ಯಯದಲ್ಲಿ ನಿಜವಾಗಿಯೂ ಕರ್ನಾಟಕಕ್ಕೆ ಬಹಳ ಅನ್ಯಾಯವಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ತಾವು ಕೇಂದ್ರ ರೈಲ್ವೆ ಸಚಿವರಿಗೆ ಅವಮಾನ ಮಾಡುತ್ತಿದ್ದೀರೆಂದು ನಾನು ಹೇಳಬೇಕಾಗುತ್ತದೆ. ಕಾರಣ, ಶ್ರೀ ಜಾಫರ್ ಷರೀಫರು ಕೇಂದ್ರ ರೈಲ್ವೆ ಮಂತ್ರಿಗಳಾಗಿ ಬಂದ ನಂತರ ಕರ್ನಾಟಕಕ್ಕೆ ಖಂಡಿತವಾಗಿ ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ. ಬೇರೆ ಯಾವುದೇ ಮಂತ್ರಿಗಳು ಇಷ್ಟು ಕೆಲಸ ಮಾಡಿಲ್ಲ. ತಾವು ಈ ರೀತಿ ಮಾತನಾಡುತ್ತಿರುವುದಕ್ಕೆ ನಮಗೂ ಅವರಿಗೂ ವೈಯಕ್ತಿಕ ದ್ವೇಷ ಇರಬೇಕೆಂದು ನಾನು ಹೇಳಬೇಕಾಗುತ್ತದೆ.

(ಗೊಂದಲ)

MR. SPEAKER:– Order... Order ...

(ಈ ಸಂಬರ್ಭದಲ್ಲಿ ಪಕ್ಷೇತರ ಸದಸ್ಯರಾದ ಶ್ರೀ ಪಾಟಾಳ್ ನಾಗರಾಜ್‌ರವರು ಕೇಂದ್ರ ಸರ್ಕಾರದ ರೈಲ್ವೆ ನೀತಿಯ ವಿರುದ್ಧ ಪ್ರತಿಭಟಿಸಿ ಕಪ್ಪು ಬಾವುಟ ಪ್ರದರ್ಶಿಸಿ ಸಭಾತ್ಯಾಗ ಮಾಡಿದರು)

ಶ್ರೀ ಬಿ. ಎಂ. ಇಬ್ರಾಹಿಮ್:– ಜಾಫರ್ ಷರೀಫರು ಕರ್ನಾಟಕಕ್ಕೆ ರೈಲ್ವೆ ವಿಚಾರದಲ್ಲಿ ಬಹಳಷ್ಟು ಕೆಲಸ ಮಾಡಿದ್ದಾರೆ. ಇವರಂತೆ ಬೇರಾವ ಮಂತ್ರಿಗಳೂ ಕೂಡ ಇಷ್ಟು ಕೆಲಸ ಮಾಡಿಲ್ಲ. ಇವರು ಕರ್ನಾಟಕಕ್ಕೆ ಮಾಡಿರುವ ಉಪಕಾರವನ್ನು ಮರೆಯುವಂತಿಲ್ಲ.

(ಗೊಂದಲ)

## ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾಗುವ ಉತ್ತರಗಳು

ಅಧ್ಯಕ್ಷರು:– ಶ್ರೀ ವಿಜಯಕುಮಾರ್ ಶೆಟ್ಟಿಯವರೆ, ತಮ್ಮ 121 (1020)ನೇ ಪ್ರಶ್ನೆಗೆ ಉತ್ತರ ಬಂದಿರುವುದಿಲ್ಲವಾದ್ದರಿಂದ, ಅದನ್ನು ಮುಂದಿನ ದಿವಸ ತೆಗೆದುಕೊಳ್ಳುತ್ತೇನೆ.

ಶ್ರೀ ವಿಜಯಕುಮಾರ ಶೆಟ್ಟಿ:– ಆಗಬಹುದು.